**ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂ.1, 6, 7, 13 ಮತ್ತು 14 ರವರ ಪರ ಶ್ರೀ. ಜಿ.ಎನ್.ಎಸ್. ವಕೀಲರಿಂದಃ**

ಅಸಲು ದಾವೆ ನಂ.194/1988ರ ದಾವೆಯಲ್ಲಿ ನನ್ನ ತಂದೆ ಅವರ ಎಲ್ಲಾ ಸಹೋದರನನ್ನು ಪಕ್ಷಗಾರರನ್ನಾಗಿ ಮಾಡಿದ್ದರು. ನಾನು ಸದರಿ ದಾವೆಯ ವಾದ ಪತ್ರ ಮತ್ತು ತೀರ್ಪಿನ ಪ್ರತಿಯನ್ನು ನೋಡಿದ್ದೇನೆ. ಅಸಲು ದಾವೆ ನಂ.194/1988ರಲ್ಲಿ ನನ್ನ ತದೆ ಹಿಸ್ಸೆ ಕೇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಸಲು ದಾವೆ ನಂ.194/1988 ಹಾಗೂ ಈ ಪ್ರಸ್ತುತ ಅಸಲು ದಾವೆ ನಂ.154/2022 ಅನ್ನು ನನ್ನ ತಂದೆಯೇ ದಾಖಲು ಮಾಡಿದ್ದರು ಎಂದರೆ ಹೌದು. ಅಸಲು ದಾವೆ ನಂ.194/1988 ರಲ್ಲಿ ಯಾವುದೇ ಹಿಸ್ಸೆ ಕೋರಿ ಕೊಂಡಿರುವುದಿಲ್ಲ, ಕೇವಲ ಉದ್ಘೋಷಣೆ ಮತ್ತು ನಿರ್ಬಂದಕಾಜ್ಞೆಯನ್ನು ಮಾತ್ರ ಕೇಳಿದ್ದರು ಎಂದರೆ ಗೊತ್ತಿಲ್ಲ. ನಮ್ಮ ತಾಯಿ ಜವರಮ್ಮ ದಿನಾಂಕ 06.06.1979 ರಂದು ತನಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ನನ್ನ ತಂದೆ ಅಸಲು ದಾವೆ ನಂ.194/1988 ರಲ್ಲಿ ಹೇಳಿದ್ದರು ಎಂದರೆ ಹೌದು. ಈ ಪ್ರಸ್ತುತ ದಾವೆಯಲ್ಲಿರುವ ಎಲ್ಲಾ ಆಸ್ತಿಗಳನ್ನು ಅಸಲು ದಾವೆ ನಂ.194/1988 ರಲ್ಲಿ ಸೇರಿಸಿದ್ದರು ಎಂದರೆ ಸರಿಯಲ್ಲ. ಅಸಲು ದಾವೆ ನಂ.194/1988 ರ ದಾವೆಯಲ್ಲಿ ವಿಲ್ ರುಜುವಾತು ಆಗದೇ ಅದಕ್ಕಿಂತ ಮೊದಲೇ ದಿಃ 06.09.1965 ರಂದು ರಾಜಣ್ಣರವರ ಹೆಸರಿಗೆ ಕ್ರಯಪತ್ರವಾಗಿದೆ ಎಂದು ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. 1979 ರಿಂದ ಇಲ್ಲಿಯವರೆಗೆ ನಿಮ್ಮ ತಂದೆ ಹೆಸರಿಗೆ ದಾವಾ ಆಸ್ತಿಯ ಖಾತೆಗಳೇನಾದರೂ ಆಗಿವೆಯಾ ಎಂದರೆ

ಸಾಕ್ಷಿ ವಿಲ್ ನಲ್ಲಿ ಹೇಳಿರುವ ಆಸ್ತಿಗಳ ಮೇಲೆ ನನ್ನ ತಂದೆ ಹೆಸರಿಗೆ ಖಾತೆಯಾಗಿವೆ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಖಾತೆಯಾಗಿವೆ ಹಾಗೂ ಯಾವ ಮ್ಯುಟೇಶನ್ ನಂಬರ್ ನಲ್ಲಿ ಖಾತೆಯಾಗಿವೆ ಎಂದು ನನಗೆ ಹೇಳಲು ಬರುವುದಿಲ್ಲ, ಆದರೆ ದಾಖಲಾತಿಗಳನ್ನು ನನ್ನ ವಕೀಲರ ಬಳಿ ಕೊಟ್ಟಿರುತ್ತೇನೆ. ದಿಃ 06.06.1979 ರಂದು ನನ್ನ ಹೆಸರಿಗೆ ವಿಲ್ ಆಗಿದೆ ಎಂದು ನಿಮ್ಮ ತಂದೆ ಈ ದಾವೆಯಲ್ಲಿ ಹೇಳಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಿಲ್ ಮೂಲಕ ನನ್ನ ತಂದೆಯ ಹೆಸರಿಗೆ ಖಾತೆಗಳಾಗಿವೆ ಎಂದು ತೋರಿಸಲು ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಮತ್ತು ಅಸಲು ದಾವೆ ನಂ.194/1988 ರಲ್ಲಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಹಳೆಯ ಪ್ರಕರಣದಲ್ಲಿ ಹಾಜರು ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ, ನಾನು ಈ ಪ್ರಕರಣದಲ್ಲಿ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 1979 ನೇ ಸಾಲಿನ ದಾಖಲಾತಿಗಳನ್ನು ನಾನು ಹಾಜರುಮಾಡಿದ್ದೇನೆ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಹೀಗಾಗಿ ಅವುಗಳಲ್ಲಿ ಪಾಲು ಬರಬೇಕೆಂದು ನಿಮ್ಮ ತಂದೆಯನ್ನು ಹೊರತುಪಡಿಸಿ ನಿಮ್ಮ ತಂದೆಯ ಸಹೋದರರು ಯಾರಾದರೂ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ, ಕೇವಲ ಸಹಿ ಮಾಡಲು ಮಾತ್ರ ಬರುತ್ತದೆ. ದಿಃ 06.09.1965ರ ಕ್ರಯ ಪತ್ರಕ್ಕೆ ನನ್ನ ಅಜ್ಜಿ ಜವರಮ್ಮ, ನನ್ನ ತಂದೆ ಲಕ್ಷ್ಮಣ ಉರುಫ್ ಪಾಪಣ್ಣ ಹಾಗೂ ನನ್ನ ದೊಡ್ಡಪ್ಪಂದಿರಾದ ಚಿಕ್ಕರಂಗಯ್ಯ ಮತ್ತು ನಾಗರಾಜರವರು ಸಬ್ ರಿಜಿಸ್ಟರ್

ಕಚೇರಿಗೆ ಹೋಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಬ್ಯಾಂಕ್ ನಲ್ಲಿ ಸಾಲ ಪಡೆಯಲು ಬೋಗ್ಯಕ್ಕೆ ಹಾಕಿಸುವುದು ಇದೆ ಎಂದು ಹೇಳಿ ನನ್ನ ತಂದೆಯಿಂದ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಗೆ ಈ ವಿಷಯ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆದರೆ ನನ್ನ ತಂದೆ ನ್ಯಾಯಾಲಯಕ್ಕೆ ಅಲೆದಾಡುತಿತದ್ದಾಗ ನಾನು ಏಕೆ ಕೋರ್ಟಿಗೆ ಹೋಗುತ್ತಿದ್ದೀರಿ ಎಂದು ಕೇಳಿದಾಗ ಅವರು ಸಾಯುವ ಒಂದು ವರ್ಷ ಮುಂಚೆ ಬೋಗ್ಯ ಪತ್ರಕ್ಕೆ ಸಹಿ ಮಾಡುವುದು ಇದೆ ಎಂದು ಹೇಳಿ ನನ್ನ ಸಹಿಯನ್ನು ಕ್ರಯಪತ್ರಕ್ಕೆ ಮಾಡಿಸಿಕೊಂಡಿದ್ದಾರೆ ಎಂದು ನನಗೆ ಹೇಳಿದರು ಎಂದು ನುಡಿಯುತ್ತಾರೆ. ಬೋಗ್ಯ ಪತ್ರ ಎಂದು ಹೇಳಿ ಮೋಸದಿಂದ ಕ್ರಯಪತ್ರಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದು ನಿಮ್ಮ ತಂದೆ ಈ ದಾವೆಯಲ್ಲಿ ಹೇಳಿದ್ದಾರಾ ಎಂದರೆ ಸಾಕ್ಷಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿರುವುದರಿಂದ ದಿಃ06.09.1965ರ ಕ್ರಯ ಪತ್ರವು ನಮಗೆ ಬದ್ಧಪಡಿಸುವುದಿಲ್ಲವೆಂದು ಈ ದಾವೆಯಲ್ಲಿ ಹೇಳಿರುತ್ತಾರಾ ಎಂದರೆ ಸಾಕ್ಷಿ ಹೇಳಿದ್ದೇವೆ ಎಂದು ನುಡಿಯುತ್ತಾರೆ. ಯಾವುದೇ ವಿಷಯಗಳನ್ನು ದಾವೆಯಲ್ಲಿ ಹೇಳದೇ ಇದ್ದರೂ ಸಹಾ ಹೇಳಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ 15ನೇ ಪ್ರತಿವಾದಿ ರಾಜಣ್ಣ ಮತ್ತು ಅವರ ಕುಟುಂಬದವರ ವಿರುದ್ಧ ಹಾಸನದ ಉಪವಿಭಾಗಾಧಿಕಾರಿಗಳ ಮುಂದೆ ಆರ್.ಎ.ನಂ.78/2012-13 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಹೌದು. ರಾಜಣ್ಣರವರ ಹೆಸರಿಗೆ ಶುದ್ಧ

ಕ್ರಯಪತ್ರವಾಗಿರುವುದರಿಂದ ಸದರಿ ಆಸ್ತಿಗಳ ಮೇಲೆ ನಿಮಗೆ ಯಾವುದೇ ಹಕಕ್ಕು ಬರುವುದಿಲ್ಲವೆಂದು ಆರ್ ಎ ನಂ.78/2012-13ರ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ಒಟ್ಟು ಕುಟುಂಬದ ಆಸ್ತಿ ಅದರಲ್ಲಿ ನಮಗಾ ಸಹಾ ಪಾಲು ಬೇಕು ಎಂದು 15ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ವಿಲ್ ನಲ್ಲಿ ಹೇಳಿರುವ ಅಸ್ತಿಗಳನ್ನು ಬಿಟ್ಟು ಪಿತ್ರಾರ್ಜಿತ ಅಸ್ತಿಗಳ ಮೇಲೆ ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ, ಹೀಗಾಗಿ ಇದರಲ್ಲಿ ನಮಗೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ಹಳಿರುವ ಎಲ್ಲಾ ದಾವಾ ಆಸ್ತಿಗಳು ದಿನಾಂಕಃ 06.09.1965ರ ಕ್ರಯ ಪತ್ರದಲ್ಲಿ ಇವೆ ಮತ್ತು ಈ ಆಸ್ತಿಗಳು ಅಸಲು ದಾವೆ ನಂ.194/1988 ರ ದಾವೆಯಲ್ಲಿ ಸೇರಿಕೊಂಡಿದ್ದವು ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಬೇರೆ ಸರ್ವೆನಂಬರುಗಳು ಇವೆ ಹಾಗೂ ವಿಲ್ ನಲ್ಲಿ ಬೇರೆ ಸರ್ವೆ ನಂಬರುಗಳು ಇವೆ. ವಿಲ್ ನಲ್ಲಿ ಹೇಳಿರುವ ಅಸ್ತಿಯ ದಾಖಲಾತಿಗಳನ್ನು ನಾನು ವಕೀಲರ ಬಳಿ ಕೊಟ್ಟಿರುತ್ತೇನೆ. ವಿಲ್ ನಲ್ಲಿ ಹೇಳಿರುವ ಎಲ್ಲಾ ಆಸ್ತಿಗಳು ದಿಃ 06.09.1965ರ ಕ್ರಯಪತ್ರದಲ್ಲಿ ಇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ದಿನಾಂಕಃ 06.09.1965ರ ಕ್ರಯಪತ್ರದಲ್ಲಿ ನಮೂದಾಗಿರುತ್ತವೆ ಎಂದರೆ ಸರಿಯಲ್ಲ.

ಕ್ರಯಪತ್ರದ ಪ್ರಕಾರ ರಾಜಣ್ಣರವರ ಹೆಸರಿಗೆ ಖಾತೆಯಾಗಿತ್ತು ಎಂದರೆ ಸಾಕ್ಷಿ ಇಲ್ಲದಾವೆ ನಡೆಯುತ್ತಿದುದ್ದರ ಕಾರಣ ಖಾತೆಯಾಗಿಲ್ಲ ಎಂದು ನುಡಿಯುತ್ತಾರೆ. 2015 ರಿಂದ ಈಚೆಗೆ ರಾಜಣ್ಣರವರ ಹೆಸರಿಗೆ ಖಾತೆಯಾಗಿರುವ ವಿಷಯ ನಮಗೆ ಗೊತ್ತಾಗಿರುತ್ತದೆ. 2025ನೇ ಸಾಲಿನವರೆಗೂ ಸಹಾ ಕ್ರಯಪತ್ರದ ಪ್ರಕಾರ ದಾವಾ ಆಸ್ತಿಯ ಖಾತೆಯು ರಾಜಣ್ಣರವರ

ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. 2015ರ ನಂತರ ನಿಮಗೆ ಗೊತ್ತಾದ ಮೇಲೆ ಮೋಸದ ಕ್ರಯಪತ್ರ ಮತ್ತು ತಪ್ಪಾಗಿ ಖಾತೆಯಾಗಿದೆ ಎಂದು ನೀವಾಗಲೀ ಅಥವಾ ನಿಮ್ಮ ತಂದೆಯಾಗಲೀ ಕಂದಾಯ ಅಧಿಕಾರಿಗಳ ಮುಂದೆ ಅದನ್ನು ಪ್ರಶ್ನೆ ಮಾಡಿ ಅಪೀಲು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ.2 ರಿಂದ 6 ರ ದಾಖಲಾತಿಗಳಲ್ಲಿ ಜವರಮ್ಮ ಹೆಸರಿದೆ ಎಂದರೆ ಹೌದು. ನಿಪಿ.7 ರಿಂದ 12 ರ ಪಹಣಿಗಳು ರಾಜಣ್ಣರವರ ಹೆಸರಿಗೆ ದಾವಾ ಆಸ್ತಿಗಳ ಖಾತೆಯಾದ ಬಗ್ಗೆ ಇರುವ ದಾಖಲಾತಿಗಳು ಎಂದರೆ ಹೌದು. ನಿಪಿ.14 ರಿಂದ 18 ರ ದಾಖಲಾತಿಗಳು ಕಂದಾಯ ನ್ಯಾಯಾಲಯದಲ್ಲಿ ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ರಾಜಣ್ಣರವರ ಹೆಸರಿಗೆ ಖಾತೆಯಾದ ಬಗ್ಗೆ ಇರುವ ದಾಖಲಾತಿಗಳು ಎಂದರೆ ಗೊತ್ತಿಲ್ಲ. ನಿಪಿ.19 ಪ್ರಕರಣಕ್ಕಿಂತ ಮೊದಲೇ ಅಂದರೆ 1965 ರಲ್ಲಿ ರಾಜಣ್ಣರವರ ಹೆಸರಿಗೆ ಕ್ರಯಪತ್ರವಾಗಿತ್ತು ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯ ಖಾತೆ ರಂಗಯ್ಯರವರ ಹೆಸರಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ರಂಗಯ್ಯರವರ ಪಿತ್ರಾರ್ಜಿತ ಅಸ್ತಿ ಎಂದು ತೊರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ದಾವಾ ಆಸ್ತಿಗಳು ಜವರಮ್ಮರವರಿಗೆ ತಾಯಿಯ ಮನೆಯಿಂದ ಬಳುವಳಿಯಾಗಿ ಬಂದಿದ್ದರಿಂದ ಅವು ಜವರಮ್ಮರವರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ರಾಜಣ್ಣರವರಿಗೆ ದಿನಾಂಕಃ06.09.1965 ರಂದು ಶುದ್ಧ

ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದರಿಂದ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾವು ಜಂಟಿ ಸ್ವಾಧೀನದಲ್ಲಿ ಇದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕ್ರಯಪತ್ರ ಆದಾಗಿನಿಂದ ರಾಜಣ್ಣ ಮತ್ತು ಅವರ ಕುಟುಂಬಸ್ಥರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಿಸ್ಸೆ ಹಕ್ಕು ಇರದೇ ಇದ್ದರೂ ಸಹಾ ನ್ಯಾಯಾಲಯದ ಮುಂದೆ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.